ತನ್ನದಲ್ಲದ ಅನ್ಯ ಪ್ರಪಂಚಕ್ಕೆ ಬಂದೆನೇನೋ.. ಅಂದುಕೊಂಡು ಕೆಲ ಹೊತ್ತು ಮೌನ ಹೊದ್ದು ಕುಳಿತ. ಮನಸ್ಸು ತನ್ನಿಂತಾನೇ ಸುಧಾರಿಸಿಕೊಂಡು ಕಷ್ಟ ಎಲ್ಲರಿಗೂ ಇದ್ದಿದ್ದೇ; ಅವರವರ ಹಣೆಬರಹದಲ್ಲಿ ಏನೇನು ಬರೆದಿದೆಯೋ ಅದನ್ನ ಅನುಭವಿಸಲೇಬೇಕು ಎಂಬ ನಿರ್ಲಿಪ್ತತೆಯ ಭಾವ ಮೂಡಿಸಿದಾಗ ಎದ್ದು ಯಶೋದಾಳ ಬಳಿ ಹೊರಡಲಣಿಯಾದ.

ಅವರಿವರ ಸಹಾಯದಿಂದ ಲಿಫ್ಟ್‌ನ ಮೂಲಕ ಮೂರನೇ ಮಹಡಿ ತಲುಪಿ ಐಸಿಯುನ ಬಾಗಿಲ ಬಳಿ ನಿಂತ. ಮಗಳ ಬೆಡ್ ಕಡೆಗೆ ಇಣುಕಿ ಕಣ್ಣಾಡಿಸುವಷ್ಟರಲ್ಲೇ ರುಕ್ಮವ್ವ ಏದುಸಿರು ಬಿಡುತ್ತಾ ಧಾವಿಸಿದಳು.

`ಹೇ.. ದೌಳಾಂವ್ವ ಲಗೂ ಬರಬಾರ್ದನ.. ಅಲ್ನೋಡ ಪೊಲೀಸ್ರ ಬಂದಾರ..' ಅಂದಳು. ಆಕೆಯ ಮಾತೂ ಇನ್ನೂ ಪೂರ್ಣಗೊಂಡಿರಲಿಲ್ಲ ಆಗ ಒಬ್ಬ ಸಿಂಗಲ್ ಸ್ಟಾರ್, ಹಾಗೂ ಒಬ್ಬ ಪಿಸಿ ಬಂದರು. 'ನಿಮ್ಮ ಮಗಳು ವಿಷಾ ತುಗೊಂಡಾಳಲ್ಲ ಅದ ನಮ್ಮ ಠಾಣಾದಾಗ ಎಂ.ಎಲ್.ಸಿ ಆಗಿರತ್ತ. ಅದಕ್ಕ ಅಕಿದೊಂದ ಸ್ಟೇಟ್ಮೆಂಟ್ ಬೇಕಾಗತ್ತ' ಅಂದರು.

ಸಂಕಪ್ಪ ಮತ್ತು ರುಕ್ಮವ್ವರಿಬ್ಬರಿಗೂ ಅವರು ಅಂದಿದ್ದು ಎಳ್ಳಷ್ಟೂ ಅರ್ಥವಾಗದೇ ಒಬ್ಬರಿಗೊಬ್ಬರೂ ಮುಖ ನೋಡಿಕೊಂಡರು.

'ನೋಡ್ರಿ.. ನಿಮ್ಮ ಮಗಳ ವಿಷಾ ತುಗೊಂಡಾಳಲ್ಲ. ಅಕಿ ಯಾಕ ತುಗೊಂಡ್ಲೂ ಅನ್ನೂ ಕಾರಣ ಕೇಳಬೇಕಷ್ಟ. ಮತ್ತ ಹಂತಾದ ಏನೂ ಇಲ್ಲ ಇದರೊಳಗ' ಅಂತ ಸಿಂಗಲ್ ಸ್ಟಾರ್ ಅಧಿಕಾರಿ ಸಮಾಧಾನ ಸವರುವ ಮಾತು ಆಡಿದ. ಆಗಲೂ ಸಂಕಪ್ಪನಿಗೆ ಏನು ಹೇಳಬೇಕೊ ತಿಳಿಯಲಿಲ್ಲ. ರುಕ್ಮವ್ವಳೂ ಈ ವಿಷಯವಾಗಿ ಒಂದಕ್ಷರ 'ಬ್ರ' ಕೂಡಾ ಅನ್ನಲಿಲ್ಲ. ಪೊಲೀಸರು ಇದೊಳ್ಳೆ ಪೇಚಿಗೆ ಸಿಲುಕಿದೆವು ಎಂಬ ಭಾವ ಮೂಡುವಷ್ಟರಲ್ಲಿ ಸಂಕಪ್ಪ ಆ ಖಾಕಿ ಬಣ್ಣದ ಲಕೋಟೆಯನ್ನ ತನ್ನ ಕಿಸೆ ಇಂದ ತೆಗೆದು ಅವರ ಕೈಯಲ್ಲಿಟ್ಟ. ಪಿಸಿ 'ಡೆತ್‌ನೋಟ್' ಇರಬಹುದೇನೋ ಎಂದು ಲಗುಬಗೆಯಿಂದ ಆ ಲಕೋಟೆ ಒಂದು ಬದಿಯನ್ನು ಕತ್ತರಿಸಿ ಅದನ್ನು ತೆಗೆದು ನಾಲ್ಕಾರು ಬಾರಿ ಮನದಲ್ಲಿ ಓದಿ ಪರಿಶೀಲಿಸಿ 'ಇದು ಕೋರ್ಟು ನೋಟಿಸ್. ಯಶೋದಾ ಅಂದ್ರ ಯಾರು?' ಎಂದು ಕೇಳಿದ. 'ಒಳಗದಾಳಲ್ಲ ಅಕೀನ. ನಮ್ಮ ಮಗಳ. ನನಗ ಚೊಚ್ಚಲ ಅಕೀನ. ಎರಡನೇದ್ದ ಮಗ ರೀ..' ರುಕ್ಮವ್ವ ಅಂದಳು.

ಆಗ ಪೊಲೀಸ್ ಸ್ವಲ್ಪ ಗಾಬರಿಗೊಂಡು ಲಕೋಟೆಯಲ್ಲಿದ್ದ ವಿಷಯ ಹೇಳಲೋ ಬೇಡ್ವೋ ಎಂಬಂತೆ 'ಅಕಿ... ಅಕಿ...' ಅಂತ ತಡವರಿಸುತ್ತಾ, 'ತಂದಿ ಆಸ್ತಿಯೊಳಗ ಪಾಲು ಬೇಕಂತ ಕೋರ್ಟಿಗೆ ಕೇಸು ಹಾಕ್ಯಾಳ?' ಅಂದ. ಸಂಕಪ್ಪ, ರುಕ್ಮವ್ವಳ ಎದೆ ಧಸಕ್ ಅಂದಿತು. ಪೊಲೀಸರು ಅವರಿಬ್ಬರನ್ನ ಸಮಾಧಾನಿಸುವುದೋ ಅಥವಾ ತಮ್ಮ ಕೆಲಸ ನಿಭಾಯಿಸುವುದೋ ತಿಳಿಯದೇ ಗರಬಡಿದಂತೆ ಗಪ್ಪನೇ ನಿಂತರು. ರುಕ್ಮವ್ವ ತನ್ನ ಸೆರಗನ್ನು ಮುದುಡಿ ಮಾಡಿ ಬಾಯಿಗ ತುರುಕಿಕೊಂಡು 'ನನ್ನ ಮಗಳ ಹಂತಾಕಿ ಅಲ್ಲೋಯಪ್ಪಾ. ಆ ಹಾದರಗಿತ್ತಿ ಮಗಂದ್ ಇದ ಕಿತಾಪತಿ' ಎಂದು ರೊಯ್ಯನೆ ಅಳತೊಡಗಿದಳು.

'ಹೌದ್ರಿ ಸಾಯಿಬ್ರ. ನನ್ನ ಮಗಳ ಪಾಲ ಕೇಳುವಂತಾಕಿ ಅಲ್ಲ' ಎಂದು ದನಿಗೂಡಿಸಿ ಟವೆಲ್ಲು ತೆಗೆದುಕೊಂಡು ಮಾರಿಗೆ ಹಿಡಿದು ಸಂಕಪ್ಪ ಮುಸಿ ಮುಸಿ ದುಃಖಿಸತೊಡಗಿದ. ಪೊಲೀಸರು ಏನೇನೋ ಅಂದು ಸಮಾಧಾನ ಹೇಳಿ ಸಂಕಪ್ಪನ ದುಬ್ಬ ಸವರುತಿದ್ದರು. ಅಷ್ಟರಲ್ಲೇ ಐಸಿಯುನಿಂದ ಓಡಿಬಂದ ನರ್ಸ್‌ವೊಬ್ಬಳು 'ಯಶೋದಾ ಕಡೆಯವ್ರ ಯಾರು ಒಳಗ ಬರ್ರಿ' ಅಂತ ಕರೆದಳು. ರುಕ್ಮವ್ವ ಅಳುವುದನ್ನು ನಿಲ್ಲಿಸಿ ಸೀರೆಯ ಸೆರಗಿನಿಂದ ಕಣ್ಣೊರಿಸಿ, ಸೊರಸೊರ ಮೂಗೇರಿಸುತ್ತಾ ಆಕೆಯನ್ನ 'ಏನಾತ್ರಿ...' ಅಂತ ಹಿಂಬಾಲಿಸಿದಳು. 'ಅಕೀಗೆ ಸಿರಿಯಸ್ ಐತಿ' ಅಂತೇಳಿ ರುಕ್ಮವ್ವ ತನ್ನನ್ನ ಹಿಂಬಾಲಿಸಿದಳೋ.. ಇಲ್ಲವೋ.. ಎಂಬುದನ್ನೂ ಲಕ್ಷ್ಯಕೊಡದೇ ಬಂದ ವೇಗದಲ್ಲೇ ಐಸಿಯುನಲ್ಲಿ ಮರೆಯಾದಳು. ಎದೆ ಬಾಯಿ ಬಿಡುತ್ತಾ ರುಕ್ಮವ್ವ ಒಳಹೋಗುವಾಗ ಸಂಕಪ್ಪನೂ ಪೊಲೀಸರನ್ನು ಕೈಮುಗಿದು ಆಕೆಗೆ ಜೊತೆಯಾದ. ಆಗ ಐಸಿಯು ಎಲ್ಲರನ್ನೂ ಒಳಹಾಕಿ ಭದ್ರ ಪಡಿಸಿಕೊಂಡ ಅಹಂನಲ್ಲಿ ಪೊಲೀಸರಿಗೆ ಹಂಗಿಸಿತು. ●

